All India Radio: Bangalore
National Bulletin In Kannada
13.10.2025 01.10 p.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

13.10.2025 01.10 p.m.

< > < > < > < >

**ಮುಖ್ಯಾಂಶಗಳು**

೧. ಎರಡನೇ ಹಂತದ ಬಿಹಾರ ವಿಧಾನಸಭಾ ಚುನಾವಣೆಗೆ ಅಧಿಸೂಚನೆ ಹೊರಡಿಸಿದ ಚುನಾವಣಾ ಆಯೋಗ ೧೨೨s ಸ್ಥಾನಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭ

೨. ಐಆರ್‌ಸಿಟಿಸಿ ಹಗರಣ ; ಆರ್‌ಜೆಡಿಯ ಲಾಲೂ ಪ್ರಸಾದ್ ಕುಟುಂಬದ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿದ ದೆಹಲಿ ನ್ಯಾಯಾಲಯ

೩. ಕರೂರ್ ಕಾಲ್ತುಳಿತ ಪ್ರಕರಣ ; ಸಿಬಿಐ ತನಿಖೆಗೆ ವಹಿಸಿದ ಸುಪ್ರೀಂಕೋರ್ಟ್

೪. ರಾಷ್ಟ್ರವ್ಯಾಪಿ ವಿಕಸಿತ ಭಾರತ ಬಿಲ್ಡಥಾನ್ ಉಪಕ್ರಮಕ್ಕೆ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಚಾಲನೆ

೫. ಟೆಸ್ಟ್ ಕ್ರಿಕೆಟ್ ; ಭಾರತ ವಿರುದ್ಧ ೨ನೇ ಇನ್ನಿಂಗ್ಸ್ ಮುಂದುವರಿಸಿದ ವೆಸ್ಟ್ ಇಂಡೀಸ್

**><><><><><**

ಬಿಹಾರದಲ್ಲಿ ಎರಡನೇ ಹಂತದ ವಿಧಾನಸಭಾ ಚುನಾವಣೆಗೆ ಇಂದು ಅಧಿಸೂಚನೆ ಹೊರಡಿಸಲಾಗಿದ್ದು, ಇದರೊಂದಿಗೆ, ೨೦ ಜಿಲ್ಲೆಗಳ ೧೨೨ ವಿಧಾನಸಭಾ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಎರಡನೇ ಹಂತದ ನಾಮಪತ್ರ ಸಲ್ಲಿಸಲು ಇದೇ ೨೦ ಕೊನೆಯ

ದಿನವಾಗಿದೆ.  ಇದೇ ೨೧ ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ೨೩ ಕೊನೆಯ ದಿನವಾಗಿದೆ. ಈ ಹಂತದ ಮತದಾನ ನವೆಂಬರ್ ೧೧ ರಂದು ನಡೆಯಲಿದೆ.  ಮಧ್ಯಾಹ್ನ ೩ ರವರೆಗೆ ನಾಮಪತ್ರ ಸಲ್ಲಿಸಬಹುದು. ಚುನಾವಣಾ ಆಯೋಗವು ನಾಮಪತ್ರ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಗಳನ್ನು ಮಾಡಿದೆ. ೨೪೩ ಸದಸ್ಯ ಬಲದ ಬಿಹಾರ ವಿಧಾನಸಭಾ ಚುನಾವಣೆಯ ಎರಡೂ ಹಂತಗಳ ಮತ ಎಣಿಕೆ ನವೆಂಬರ್ ೧೪ ರಂದು ನಡೆಯಲಿದೆ. ಒಟ್ಟು ೭.೪೨ ಕೋಟಿ ಮತದಾರರು ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಮತ ಚಲಾಯಿಸಲಿದ್ದಾರೆ.  ಈ ನಡುವೆ ೭ ರಾಜ್ಯಗಳ ೮ ವಿಧನಸಭಾ ಸ್ಥಾನಗಳ ಉಪಚುನಾವಣೆಗೂ ಕೇಂದ್ರ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿದೆ. ಜಮ್ಮು-ಕಾಶ್ಮೀರದ ಎರಡು, ಜಾರ್ಖಂಡ್, ರಾಜಸ್ಥಾನ, ತೆಲಂಗಾಣ, ಪಂಜಾಬ್, ಮಿಜೋರಾಂ ಮತ್ತು ಒಡಿಶಾದ ತಲಾ ಒಂದು ಸ್ಥಾನಗಳಲ್ಲಿ ಉಪಚುನಾವಣೆ ನಡೆಯಲಿದೆ. ಈ ಎಲ್ಲ ಸ್ಥಾನಗಳಿಗೆ ನವೆಂಬರ್ ೧೧ ರಂದು ಮತದಾನ ನಡೆಯಲಿದ್ದು, ೧೪ ರಂದು ಮತ ಎಣಿಕೆ ನಡೆಯಲಿದೆ

><><><><><

ಐಆರ್‌ಸಿಟಿಸಿ ಹಗರಣ ಪ್ರಕರಣದಲ್ಲಿ ದೆಹಲಿ ನ್ಯಾಯಾಲಯ, ರಾಷ್ಟ್ರೀಯ ಜನತಾದಳ, ಆರ್‌ಜೆಡಿ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಅವರ ಪತ್ನಿ ರಾಬ್ಡಿ ದೇವಿ, ಮತ್ತು ಪುತ್ರ ತೇಜಸ್ವಿ ಯಾದವ್ ಸೇರಿದಂತೆ ಹಲವರ ಮೇಲೆ ವಿವಿಧ ಕ್ರಿಮಿನಲ್ ಆರೋಪಗಳನ್ನು ಹೊರಿಸಿದೆ. ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಈ ಆದೇಶ ಹೊರಡಿಸಿದ್ದಾರೆ. ನ್ಯಾಯಾಲಯ ಮೂವರ ವಿರುದ್ಧ ಭ್ರಷ್ಟಾಚಾರ, ಕ್ರಿಮಿನಲ್ ಪಿತೂರಿ ಮತ್ತು ವಂಚನೆಯ ಆರೋಪಗಳನ್ನು ಹೋರಿಸಲಾಗಿದೆ. ಎಲ್ಲಾ ಆರೋಪಿಗಳು ಈ ಆರೋಪಗಳನ್ನು ತಳ್ಳಿಹಾಕಿರುವುದರಿಂದ ಪ್ರಕರಣದ ವಿಚಾರಣೆ

ಮುಂದುವರೆಯಲಿದೆ. ೨೦೦೪ ರಿಂದ ೨೦೦೯ ರ ನಡುವೆ ಲಾಲೂ ಯಾದವ್ ರೈಲ್ವೆ ಸಚಿವರಾಗಿದ್ದ ಅವಧಿಯಲ್ಲಿ ಖಾಸಗಿ ಸಂಸ್ಥೆ ಗುತ್ತಿಗೆ ನೀಡಲು ಲಾಲೂ ಯಾದವ್ ಮತ್ತು ಅವರ ಕುಟುಂಬ ನಿರ್ಧಿಷ್ಟ ಭೂಮಿಯನ್ನು ಲಂಚವಾಗಿ ಸ್ವೀಕರಿಸಿದೆ ಎಂದು ಕೇಂದ್ರೀಯ ತನಿಖಾ ದಳ ಸಿಬಿಐ ಆರೋಪಿಸಿದೆ. ಲಾಲೂಯಾದವ್ ಕುಟುಂಬ ಈ ಸಂಪೂರ್ಣ ಪ್ರಕರಣ ರಾಜಕೀಯ ಪ್ರೇರಿತವಾಗಿದೆ ಎಂದು ತಿಳಿಸಿದೆ.

><><><><

ಕಳೆದ ತಿಂಗಳು ೨೭ ರಂದು ತಮಿಳುನಾಡಿನ ಕರೂರಿನಲ್ಲಿ ನಡೆದ ತಮಿಳಗ ವೆಟ್ರಿ ಕಳಗಂ ರಾಜಕೀಯ ರ್‍ಯಾಲಿಯಲ್ಲಿ ಕನಿಷ್ಠ ೪೧ ಜನರು ಸಾವನ್ನಪ್ಪಿದ ಘಟನೆಯ ಬಗ್ಗೆ ಸುಪ್ರೀಂ ಕೋರ್ಟ್ ಸಿಬಿಐ ತನಿಖೆಗೆ ಆದೇಶಿಸಿದೆ. ತಮಿಳು ನಟ ವಿಜಯ್ ನೇತೃತ್ವದ ಪಕ್ಷವು ಈ ಘಟನೆಯ ಬಗ್ಗೆ ವಿಶೇಷ ತನಿಖಾ ತಂಡದ ತನಿಖೆಗೆ ಮದ್ರಾಸ್ ಹೈಕೋರ್ಟ್ ನಿರ್ದೇಶನವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ನ್ಯಾಯಮೂರ್ತಿಗಳಾದ ಜೆಕೆ ಮಹೇಶ್ವರಿ ಮತ್ತು ಎನ್ವಿ ಅಂಜಾರಿಯಾ ಅವರನ್ನೊಳಗೊಂಡ ಸುಪ್ರೀಂ ಕೋರ್ಟ್ ಪೀಠವು ತನಿಖೆಯ ಮೇಲ್ವಿಚಾರಣೆಗೆ ಮಾಜಿ ಸುಪ್ರೀಂ ಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ಅಜಯ್ ರಸ್ತೋಗಿ ನೇತೃತ್ವದ ಮೂವರು ಸದಸ್ಯರ ಸಮಿತಿಗೆ ಆದೇಶಿಸಿದೆ.

><><><><

ಭಾರತ ಉತ್ಪಾದನೆ ಆಧರಿತ ಆರ್ಥಿಕತೆಯ ಮೂಲಕ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸಾಧ್ಯ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ವಿಕಸಿತ ಭಾರತ ಬಿಲ್ಡಥಾನ್ ೨೦೨೫ ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ೨೧ನೇ ಶತಮಾನ ಜ್ಞಾನ ಆಧಾರಿತ

ಶತಮಾನವಾಗಿದ್ದು, ಈ ಜ್ಞಾನಚಾಲಿತ ಜಗತ್ತು ಮತ್ತು ಆರ್ಥಿಕತೆಯನ್ನು ಭಾರತ ಮುನ್ನಡೆಸಲಿದೆ ಎಂದು ಹೇಳಿದರು.

ಧ್ವನಿ : ಧರ್ಮೇಂದ್ರ ಪ್ರಧಾನ್ (೨೬ ಸೆಕೆಂಡ್‌ಗಳು)

ವಿಕಸಿತ ಭಾರತ್ ಬಿಲ್ಡಥಾನ್ ಒಂದು ರಾಷ್ಟ್ರವ್ಯಾಪಿ ಉಪಕ್ರಮವಾಗಿದ್ದು, ೬ ರಿಂದ ೧೨ನೇ ತರಗತಿಯ ವಿದ್ಯಾರ್ಥಿಗಳು ತಮ್ಮ ಸೃಜನಶೀಲತೆ ಮತ್ತು ಸಮಸ್ಯೆ ಪರಿಹರಿಸುವ ಕೌಶಲ್ಯಗಳನ್ನು ಪ್ರದರ್ಶಿಸಲು, ಸಬಲೀಕರಣಗೊಳಿಸಲು ಶಾಲೆಗಳು ಮತ್ತು ಶಿಕ್ಷಕರನ್ನು ಆಹ್ವಾನಿಸುತ್ತದೆ. ಆತ್ಮನಿರ್ಭರ ಭಾರತ, ಸ್ವದೇಶಿ, ವೋಕಲ್ ಫಾರ್ ಲೋಕಲ್ ಮತ್ತು ಸಮೃದ್ಧ ಭಾರತ ಎಂಬ ನಾಲ್ಕು ವಿಷಯಗಳ ಮೇಲೆ ಮೂಲಮಾದರಿಗಳನ್ನು ರೂಪಿಸಲು ಅಥವಾ ನಿರ್ಮಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಮೂಲಕ ಶಾಲಾ ಮಟ್ಟದಲ್ಲಿ ನಾವೀನ್ಯತೆಯ ಸಂಸ್ಕೃತಿಯನ್ನು ಬಲಪಡಿಸುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ. ಈ ಕಾರ್ಯಕ್ರಮವನ್ನು ಶಿಕ್ಷಣ ಸಚಿವಾಲಯವು ಅಟಲ್ ಇನ್ನೋವೇಶನ್ ಮಿಷನ್ ಎಐಎಂ ಮತ್ತು ನೀತಿ ಆಯೋಗದ ಸಹಯೋಗದೊಂದಿಗೆ ಆಯೋಜಿಸುತ್ತಿದೆ. ಇದನ್ನು ಅಧಿಕೃತ ಪೋರ್ಟಲ್‌ಗಳಾದ **vbb.mic.gov.in** ಅಥವಾ **schoolinnovationmarathon.org/registration** ಮೂಲಕ ದೇಶಾದ್ಯಂತ ನೇರ ಪ್ರಸಾರ ಮಾಡಲಾಗುತ್ತಿದೆ. ಬಿಲ್ಡಥಾನ್ ೧ ಕೋಟಿ ರೂಪಾಯಿ ಪ್ರಶಸ್ತಿಯನ್ನು ಒಳಗೊಂಡಿದೆ, ಇದನ್ನು ೧೦ ರಾಷ್ಟ್ರೀಯ ಮಟ್ಟದ ವಿಜೇತರು, ೧೦೦ ರಾಜ್ಯ ಮಟ್ಟದ ವಿಜೇತರು ಮತ್ತು ೧ ಸಾವಿರ ಜಿಲ್ಲಾ ಮಟ್ಟದ ವಿಜೇತರಿಗೆ ವಿತರಿಸಲಾಗುತ್ತದೆ.

><><><><><

ಆಸ್ಟ್ರೇಲಿಯಾದಲ್ಲಿ ಇಂದಿನಿಂದ ನಡೆಯಲಿರುವ ೪ನೇ ಆವೃತ್ತಿಯ ಆಸ್ಟ್ರಾ ಹಿಂದ್ ಸಮಾರಾಭ್ಯಸದಲ್ಲಿ ಭಾಗವಹಿಸಲು ಭಾರತೀಯ ಸೇನೆಯ ಸುಮಾರು ೧೨೦ ಸೈನಿಕರ ತಂಡ ಆಸ್ಟ್ರೇಲಿಯಾ ತಲುಪಿದೆ. ಈ ಸಮಾರಾಭ್ಯಾಸ ರಕ್ಷಣಾ ಸಹಕಾರವನ್ನು ಬಲಪಡಿಸುವ ಜೊತೆಗೆ ಸಹಯೋಗ ಮತ್ತು ಪರಸ್ಪರ ವಿಶ್ವಾಸಾರ್ಹತೆಯನ್ನು ಬಲಪಡಿಸುತ್ತದೆ ಎಂದು ಕ್ಯಾನ್ಬೇರಾದಲ್ಲಿರುವ ಭಾರತೀಯ ಹೈಕಮೀಷನ್ ತಿಳಿಸಿದೆ. ಮುಕ್ತ ಮತ್ತು ಅರೆ ಮರುಭೂಮಿ ಭೂಪ್ರದೇಶದಲ್ಲಿ ಜಂಟಿ ತುಕಡಿ ಮಟ್ಟದ ಕಾರ್ಯಾಚರಣೆಗಳ ಮೇಲೆ ಸಮರಾಭ್ಯಾಸ ಕೇಂದ್ರೀಕರಿಸಿದೆ. ಜಂಟಿ ಯೋಜನೆ ಯುದ್ಧತಂತ್ರದ ಕವಾಯತುಗಳು ಹಾಗೂ ವಿಶೇಷ ಶಸ್ತ್ರಾಸ್ತ್ರ ಕೌಶಲ್ಯಗಳಂತಹ ಕಾರ್ಯಾಚರಣೆಗಳನ್ನು ಪಡೆಗಳು ಕೈಗೊಳ್ಳಲಿವೆ. ಇಂಡೋ ಪೆಸಿಫಿಕ್ ಪ್ರದೇಶದಲ್ಲಿ ಭದ್ರತೆ ಹೆಚ್ಚಿಸುವ ಮತ್ತು ನಿಯಮಾಧಾರಿತ ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ಉತ್ತೇಜಿಸುವತ್ತ ಭಾರತ-ಆಸ್ಟ್ರೇಲಿಯಾ ರಾಷ್ಟ್ರಗಳು ಗಮನ ಹರಿಸಿವೆ.

><><><><

ಬಹು-ಮಾದರಿ ಸಂಪರ್ಕಕ್ಕಾಗಿ ರೂಪಿಸಲಾದ ಪ್ರಧಾನ ಮಂತ್ರಿ ಗತಿಶಕ್ತಿ ರಾಷ್ಟ್ರೀಯ ಯೋಜನೆ ಇಂದಿಗೆ ನಾಲ್ಕು ವರ್ಷಗಳನ್ನು ಪೂರೈಸುತ್ತಿದೆ. ವಿವಿಧ ಆರ್ಥಿಕ ವಲಯಗಳಿಗೆ ಬಹುಮಾದರಿ ಸಂಪರ್ಕ ಮೂಲಸೌಕರ್ಯವನ್ನು ಒದಗಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ೨೦೨೧ ರ ಅಕ್ಟೋಬರ್ ೧೩ ರಂದು ಈ ಯೋಜನೆಯನ್ನು ಪ್ರಾರಂಭಿಸಿದ್ದರು.

><><><><

ಭಾರತ ಪ್ರವಾಸದಲ್ಲಿರುವ ಕೆನಡಾದ ವಿದೇಶಾಂಗ ಸಚಿವೆ ಅನಿತಾ ಆನಂದ್ ಇಂದು ನವದೆಹಲಿಯಲ್ಲಿ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್ ಮತ್ತು ವಾಣಿಜ್ಯ ಸಚಿವ ಪಿಯೂಷ್

ಗೋಯಲ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಎರಡು ದಿನಗಳ ಭಾರತ ಭೇಟಿಗಾಗಿ ಅವರು ನಿನ್ನೆ ರಾತ್ರಿ ನವದೆಹಲಿಗೆ ಆಗಮಿಸಿದರು.

><><><><

ಪಶ್ಚಿಮ ಬಂಗಾಳದ ದುರ್ಗಾಪುರದಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಪೊಲೀಸರು ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಸದ್ದಾಂ ಎಂಬ ಆರೋಪಿಯನ್ನು ಇಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುವುದು. ನಿನ್ನೆ ದುರ್ಗಾಪುರ ನ್ಯಾಯಾಲಯವು ಈ ಪ್ರಕರಣದಲ್ಲಿ ಬಂಧಿತರಾದ ಮೂವರು ಆರೋಪಿಗಳಿಗೆ ೧೦ ದಿನಗಳ ಪೊಲೀಸ್ ಕಸ್ಟಡಿ ವಿಧಿಸಿತ್ತು.

><><><><

ನವದೆಹಲಿಯ ಅರುಣ್ ಜೇಟ್ಲಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ-ವೆಸ್ಟ್ ಇಂಡೀಸ್ ನಡುವಿನ ಟೆಸ್ಟ್ ಸರಣಿಯ ೨ನೇ ಮತ್ತು ಅಂತಿಮ ಪಂದ್ಯದ ೪ನೇ ದಿನದಾಟದಲ್ಲಿಂದು ವೆಸ್ಟ್ ಇಂಡೀಸ್ ತನ್ನ ಎರಡನೇ ಇನ್ನಿಂಗ್ಸ್ ಮುಂದುವರಿಸಿದೆ. ಇತ್ತೀಚಿನ ವರದಿ ಬಂದಾಗ ವೆಸ್ಟ್ ಇಂಡೀಸ್ 4 ವಿಕೆಟ್ ನಷ್ಟಕ್ಕೆ 293 ರನ್ ಮಾಡಿ ಆಡುತ್ತಿದೆ. ಫಾಲೋಆನ್ ಎದುರಿಸಿದ ಬಳಿಕ ೩ನೇ ದಿನದಾಟದ ಅಂತ್ಯಕ್ಕೆ ನಿನ್ನೆ, ವೆಸ್ಟ್ ಇಂಡೀಸ್ ತನ್ನ ೨ನೇ ಇನ್ನಿಂಗ್ಸ್‌ನಲ್ಲಿ ೨ ವಿಕೆಟ್‌ಗಳಿಗೆ ೧೭೩ ರನ್ ಗಳಿಸಿತ್ತು.

><><>END<><><